17.	ದಕ್ಷಿಣ ಕನ್ನಡ	232
18.	ಮಂಡ್ಯ	211
19.	ಚಿಕ್ಕಮಗಳೂರು	76
20.	ಹಾಸನ	125
21.	ಕೊಡಗು	57
	ಒಟ್ಟು	3659

ಅ) ಇದೆ.

ಶಿಕ್ಷಕೇತರ ಸಿಬ್ಬಂದಿಗಳಿಗೆ ಗಡ್ತಿ ನೀಡುವ ಮೂಲಕ ಹಾಗೂ ಅನುಕಂಪ ಆಧಾರದ ಮೂಲಕ ನೇಮಕ ಮಾಡಿ ಭರ್ತಿ ಮಾಡಲಾಗುತ್ತಿದೆ.

ವಿಷಯ:- ಕಾಪು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 265(164)

ಶ್ರೀ ವಸಂತ ವಿ. ಸಾಲಿಯಾನ (ಕಾಪು):- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾಪುವಿನಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭವಾದದ್ದು ಯಾವಾಗ?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :-

ಅ) 1992-93ನೇ ಶೈಕ್ಷಣಿಕ ವರ್ಷದಲ್ಲಿ.

ವಿಷಯ:- ಆಳಂದ ತಾಲ್ಲೂಕಿನಲ್ಲಿ ಸಸಿಗಳನ್ನು ಬೆಳೆಸಿರುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 266(326)

ಶ್ರೀ ರೇವುನಾಯಕ್ ಬೆಳಮಗಿ(ಕಮಲಾಪುರ) :- ಮಾನ್ಯ ಆರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಲ್ಬರ್ಗ ಆಳಂತ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಸಿಗಳನ್ನು ನೆಡಲು ಎಷ್ಟು ತಗ್ಗುಗಳನ್ನು ತೋಡಲಾಗಿದೆ ಮತ್ತು ಎಷ್ಟು ಸಸಿಗಳನ್ನು ನೆಡಲಾಗಿದೆ.

ಆ) ತಗ್ಗು ತೋಡುವ ಗುತ್ತಿಗೆದಾರರಿಗೆ ಹಣ ಪಾವತಿ ಮಾಡದೆ ಇರುವುದರ ಬಗ್ಗೆ ದೂರುಗಳು ಏನಾದರೂ ಬಂದಿದೆಯೇ? ಬಂದಿದ್ದಲ್ಲಿ ಕೈಕೊಂಡ ಕ್ರಮಗಳೇನು?

ಶ್ರೀ ಹೆಚ್.ವೈ.ಮೇಟಿ(ಆರಣ್ಯ ಸಚಿವರು):-

ಅ) ಗುಲ್ಬರ್ಗಾ ಆಳಂದ ತಾಲ್ಲೂಕಿನಲ್ಲಿ ತಗ್ಗುಗಳ ಹಾಗೂ ನೆಟ್ಟ ಸಸಿಗಳ ವಿವರಣೆ ಈ ಕೆಳಕಂಡಂತೆ ಇರುತ್ತದೆ.

ಕ್ರ ಸಂ	ತಾಲ್ಲೂಕು	ವರ್ಷ	ತೋಡಿದ ತಗ್ಗುಗಳು	ತೋಡಿದ ಗುಂಡಿಗಳು	ನೆಟ್ಟ ಸಸಿಗಳು
1.	ಗುಲ್ಬರ್ಗಾ	1991-92	25,000	11,280	1, 11,280
		1992-93	14,525	22,700	88,800
		1993-94	25,844	22,764	1,26,140
	ಒಟ್ಟು		62,369	56,744	3, 18,220
2.	ಆಳಂದ	1991-92	58,300	79,950	3, 13, 150
		1992-93	66,800	37,000	3,04,200
		1993-94	93,453	57,575	4,31,387
	ಒಟ್ಟು		2, 18,553	1,69,525	10,48,737
	(1+2)ಮೊತ್ತ		2,83,922	2,26,269	13,66,957

ಆ) ಗುಲ್ಬರ್ಗದ ಅಶೋಕ ಜನಾರ್ಧನ್ ರಾವ್ ಇವರು ತಾವು ಸಾವದಿಗಿಯಲ್ಲಿ (3000) ಮೂರು ಸಾವಿರ ತಗ್ಗುಗಳನ್ನು ತೋಡಿದ್ದು ಇದಕ್ಕೆ ಹಣವನ್ನು ಪಾವತಿ ಮಾಡಿಲ್ಲವೆಂದು ಮಾನ್ಯ ವಿಧಾನ ಪರಿಷತ್ ಸಭಾಪತಿಗಳಿಗೆ ದೂರು ನೀಡಿದ್ದು ಈ ಬಗ್ಗೆ ಮಾನ್ಯ ಸಭಾಪತಿಗಳಿಗೆ ಆಪಾದನೆಯು ಸತ್ಯಕ್ಕೆ ದೂರವಾಗಿರುತ್ತದೆ ಎಂದು ಉಪ ಆರಣ್ಯ ಸಂರಕ್ಷಣಾಧಿಕಾರಿ, ಗುಲ್ಬರ್ಗ (ಪ್ರಾದೇಶಿಕ ಆರಣ್ಯ ವಿಭಾಗ) ಇವರು ವಿವರವಾದ ವರದಿಯನ್ನು ಸಲ್ಲಿಸಿರುತ್ತಾ.

ವಿಷಯ:- ಉತ್ತರ ಕನ್ನಡ ಜಿಲ್ಲೆಯ ಕಾಲೇಜುಗಳಲ್ಲಿ ಸ್ನಾತಕೋತ್ತರ ಶಿಕ್ಷಣ ಪ್ರಾರಂಭ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 267(497)

ಡಾ: ಯು.ಚಿತ್ತರಂಜನ್ (ಭಟ್ಕಳ):- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಅನೇಕ ಕಾಲೇಜುಗಳಲ್ಲಿ ಉತ್ತಮ ಸೌಲಭ್ಯವಿದ್ದರೂ ಕೂಡ ವಿಜ್ಞಾನ, ಕಲೆ ಮತ್ತು ವಾಣಿಜ್ಯ ವಿಭಾಗದಲ್ಲಿ ಸ್ನಾತಕೋತ್ತರ ಶಿಕ್ಷಣ ನೀಡುವ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಡಿ.ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :-

ಅ) ಸಂಯೋಜಿತವಾಗಿರುವ ವಿಜ್ಞಾನ, ಕಲಾ ಮತ್ತು ವಾಣಿಜ್ಯ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೋರ್ಸನ್ನು ಪ್ರಾರಂಭಿಸಲು ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಧೋರಣೆಯಂತೆ ಅನುಮತಿಸುತ್ತಿಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ:- ವಿಜಾಪುರ ಜಿಲ್ಲೆಯಲ್ಲಿ ಮಾನ್ಯತೆ ಪಡೆದ ಮಾಧ್ಯಮಿಕ ಶಾಲೆಗಳ ಸಂಖ್ಯೆ.